ಶ್ರೀ ಬಿ. ಬಸವಲಿಂಗಪ್ಪ.—ಮನೆಗಳು ಇಲ್ಲದವರು ಎಂದರೆ, ಜಮೀನು ಇರುತ್ತದೆ, ಮನೆಗಳು ಇರುವುದಿಲ್ಲ. ನಿವೇಶನವಿಲ್ಲದವರು ಎಂದರೆ ನಿರ್ಗತಿಕರು ಎಂದು ಹೇಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಸೀಕೆರೆಯ ಮುನಿಸಿಪಾಲಿಟಿಯವರಿಗೆ ಈ ಬಗ್ಗೆ ಆದೇಶವನ್ನು ಹಿಂದೆ ಕೊಡಲಾಗಿದೆ ಎಂದು ಹೇಳಿದ್ದೀರಿ. ಕಳೆದ ತಿಂಗಳು ತಾವು ಅರಸೀಕೆರೆ ಪುರಸಭೆಯ ಒಂದು ಕಾರ್ಯಕ್ರಮಕ್ಕೆ ಹೋದಾಗ, ಸೈಟ್ ಇಲ್ಲದವರಿಗೆ ಸೈಟ್ ಹಂಚಲು ಹೋಗುತ್ತಿದ್ದಾರೆಂದು ತಮ್ಮ ಟೂರ್ ಪ್ರೋಗ್ರಾಮ್‌ನಲ್ಲಿ ಹೇಳಲಾಗಿತ್ತು. ಆದರಂತೆ ತಾವು ಆ ದಿನ ಸೈಟ್‌ಗಳನ್ನು ಹಂಚಿಕೆ ಮಾಡಿದಿರಾ? ಪುರಸಭೆಯವರು ಆ ದಿನ ತಮ್ಮ ಆದೇಶವನ್ನು ಕಡೆಗಣಿಸಿ ಆ ದಿನ ಸೈಟ್‌ಗಳನ್ನು ಹಂಚುವ ವ್ಯವಸ್ಥೆ ಮಾಡಿಲ್ಲಿಲ್ಲ ಎಂದು ನಾನು ಹೇಳುತ್ತೇನೆ. ಅದಕ್ಕೆ ತಮ್ಮ ಅಭಿಪ್ರಾಯವೇನು?

ಶ್ರೀ ಬಿ. ಬಸವಲಿಂಗಪ್ಪ.—ಆ ದಿವಸ ಆ ಒಂದು ಕಾರ್ಯಕ್ರಮವಿರಲಿಲ್ಲ, ಆದರೆ ಹಾಸನ ಮತ್ತು ಅರಸೀಕೆರೆ ರೋಡ್‌ನ ಮಧ್ಯದಲ್ಲಿ ೨೫೫ ಸೈಟ್‌ಗಳನ್ನು ಮಾಡಿದ್ದರು. ಆದರೆ ಅವುಗಳ ವಿಸ್ತೀರ್ಣ ಸರಿಯಾಗಿರಲಿಲ್ಲ. ಹತ್ತು—ಹದಿನೈದು, ಇಪ್ಪತ್ತು ಹದಿನೈದರ ಅಳತೆಯ ಸೈಟ್ ಗಳಾಗಿದ್ದವು. ಆದಕಾರಣ ಅದರ ವಿಸ್ತೀರ್ಣವನ್ನು ಜಾಸ್ತಿ ಮಾಡಿ ಸೈಟ್‌ಗಳನ್ನು ಬಡವರಿಗೆ ಕೊಡಿ ಎಂದು ಆದೇಶ ಕೊಟ್ಟು ಬಂದಿದ್ದೇನೆ.

ಶ್ರೀ ಎಚ್, ಎಸ್ ಸಿದ್ದಪ್ಪ.—ಸೈಟ್ ಪಡೆದುಕೊಂಡವರನ್ನು ಆ ಜಾಗದಿಂದ ಒಡಿಸಂತ್ತಿದ್ದಾರೆ ?

ಶ್ರೀ ಬಿ. ಬಸವಲಿಂಗಪ್ಪ.—ಆ ರೀತಿ ಒಡಿಸುವುದಕ್ಕಾಗುವುದಿಲ್ಲ.

CIVIL COURT AT DAVANGERE

431. SMT. C. NAGAMMA KESHAVAMURTHY (Davangere:)

Will the Minister for Law and Parliamentary Affairs be pleased to state:—

whether the Government has taken a decision for establishing Civil Court at Davangere ?

SRI D. K. NAIKAR.—(Minister for Law and Parliamentary Affairs:) No.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಚಿತ್ರದುರ್ಗ ಸಿವಿಲ್ ಕೋರ್ಟ್ ಮುಂದೆ ಇರುವ ಕೇಸ್‌ಗಳಸಂಖ್ಯೆ ಎಷ್ಟು? ಹರಿಪರ ಮತ್ತು ದಾವಣಗೆರೆ ಈ ಎರಡು ತಾಲ್ಲೂಕ್‌ಗಳಿಗೆ ಸಂಬಂಧಪಟ್ಟಂತೆ ಇರುವ ಕೇಸ್‌ಗಳ ಸಂಖ್ಯೆ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಕೆ ನಾಯ್ಕರ್. ಈ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀಮತಿ ಸಿ.ನಾಗಮ್ಮ ಕೇಶವಮೂರ್ತಿ.—ಈ ಬೇತಿಕೆ ಹೊಸದೇನೂ ಅಲ್ಲ. ಕೆಲವಾರು ವರ್ಷಗಳಿಂದ ಇದರ ಬಗೆ ರೆಪ್ರಸೆಂಟೇಷನ್ ಕೊಡಲಾಗುತ್ತಿದೆ. ತಮಗೂ ಸಹ ಒಂದು ಅಪ್ಲಿಕೇಷನ್ ಬಂದಿರಬಹುದು. ಈ ಬೇತಿಕೆಯ ಬಗ್ಗೆ ಸರ್ಕಾರದವರು ಶೀಘ್ರದಲ್ಲಿ ಒಂದು ತೀರ್ಮಾನಕ್ಕೆ ಬಂದು ಅಲ್ಲಿಗೆ ಸಿವಿಲ್‌ಕೋರ್ಟ್ ಕೊಡುತ್ತಾರೋ ಹೇಗೆ ಎಂಬುದನ್ನು ಹೇಳಬೇಕು?

ಶ್ರೀ ಡಿ. ಕೆ. ನಾಯಕರ್.—೧೯೭೧ನೇ ಇಸವಿಯಲ್ಲಿ ರಾಜ್ಯಪಾಲರು ಆ ಸ್ಥಳಕ್ಕೆ ಭೇಟಿಕೊಟ್ಟಾಗ ಅಲ್ಲಿಯ ಬಾರ್ ಅಸೋಸಿಯೇಷನ್ ಅವರು ಮತ್ತು ಅಲ್ಲಿಯ ಪ್ರತಿಷ್ಠಿತ ಜನರು ಅವರಿಗೆ ಈ ಬಗ್ಗೆ ಒಂದು ರೆಪ್ರಸೆಂಟೇಷನ್ ಕೊಟ್ಟರು. ಅದನ್ನು ಹೈಕೋರ್ಟಿಗೆ ಅವರ ಶಿಫಾರಸ್ ಕೇಳುವುದಕ್ಕೆ ಕಳುಹಿಸಲಾಯಿತು. ೧೯೭೧ನೇ ಸಾಲಿನಲ್ಲಿಯ ಅಂಕಿಅಂಶಗಳ ಪ್ರಕಾರ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಸಿವಿಲ್ ಕೋರ್ಟ್‌ಗಳು ಇರಬಾರದೆಂದು ಹೈಕೋರ್ಟಿನವರು ಆಗ ತೀರ್ಮಾನಕ್ಕೆ ಬಂದಿದ್ದಾರೆ. ಅದರಂತೆ ರೆಪ್ರಸೆಂಟೇಷನ್ ಮಾಡಿದವರಿಗೆ ಉತ್ತರವನ್ನು ಸಹಕೊಡಲಾಗಿದೆ. ಪುನಃ ೧೯೭೨ನೇ ಸಾಲಿನಲ್ಲಿ ಮುಖ್ಯ

ಮಂತ್ರಿಗಳಿಗೆ ಈ ವಿಚಾರದಲ್ಲಿ ಒಂದು ರೆಪ್ರಸೆಂಟೇಷನ್ ಕೊಟ್ಟಿದಾರೆ. ಅದನ್ನು ಹೈಕೋರ್ಟಿಗೆ ಕಳಿಸಲಾಗಿದೆ. ಅವರಿಂದ ಫೈನಲ್‌ರಿಪೋರ್ಟ್ ಬಂದಿಲ್ಲ.ಅವರಿಂದ ರಿಪೋರ್ಟ್ ಬಂದ ನಂತರ ಸರ್ಕಾರ ಯೋಗ್ಯ ತೀರ್ಮಾನ ಕೈಕೊಳ್ಳುತ್ತದೆ.

ಶ್ರೀಮತಿ ಪಿ. ನಾಗಮ್ಮ ಕೇಶವಮೂರ್ತಿ.—2-3 ತಿಂಗಳ ಹಿಂದೆ ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಬಂದು ಜಾಗ ಪರಿಶೀಲನೆ ಮಾಡಿ, ಇಂತಹ ಜಾಗದಲ್ಲಿಯೇ ಇರಬೇಕೆಂದು ಪರಿಶೀಲನೆ ಮಾಡಿ ಹೋಗಿದ್ದಾರೆ. ಈ ಬಗ್ಗೆ ಅಲ್ಲಿಯ ಮುನಿಸಿಪಲ್ ಕೌನ್ಸಿಲ್‌ನವರು ಸಹ ಒಂದು ತೀರ್ಮಾನ ಕೈಕೊಂಡಿದ್ದಾರೆ. ಇದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ.ಕೆ. ನಾಯ್ಕರ್.— ಹೈಕೋರ್ಟಿನವರು ಡಿಸ್ಟ್ರಿಕ್ಟ್ ಜಡ್ಜ್ ಮೂಲಕ ಅದನ್ನು ಮಾಡಿಸಿರಬಹುದು. ನಮಗೆ ಆ ಬಗ್ಗೆ ಒಂದು ರಿಪೋರ್ಟ್ ಬಂದನಂತರ, ಮೈಸೂರ ಸಿವಿಲ್‌ಕೋರ್ಟ್ ಆಕ್ಟ್ ಪ್ರಕಾರ ಸಿವಿಲ್ ಕೋರ್ಟನ್ನು ಹೈಕೋರ್ಟಿನ ಶಿಫಾರಸ್ ಮೇರೆಗೆ ತೆರೆಯಬೇಕೆಂದಿದ್ದೇವೆ. ಅವರ ರಿಪೋರ್ಟ್ ಬಾರದೆ ನಾವು ಯಾವುದೇ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಪಿ. ಎಂ. ಬಂಗಿ —ಈಗ ಕೆಲಸ ಸಾಕಷ್ಟು ಇರುವುದರಿಂದ, ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಸರ್ಕ್ಯೂಟ್ ಕೋರ್ಟ್ ಮಾಡುವುದಕ್ಕೆ ಏನಾದರೂ ಅಭ್ಯಂತರವಿದೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಆ ತರಹದ ಮನವಿಬಂದಿಲ್ಲ ಬಂದರೆ ವಿಚಾರ ಮಾಡಲಾಗುತ್ತದೆ.

PROMOTIONS TO DISTRICT ENGINEERS OF DISTRICT LOCAL BOARDS OF FORMER BOMBAY STATE

493. SRI GOPINATH R. SANDRA (Hubli).—

Will the Minister for Public Works and Electricity be pleased to state —

(*a*) the number of officers of District Local Boards working as District Engineers and Assistant Engineers in the District Local Boards of former Bombay State, before their abolition in the year 1959 ;

(*b*) the number of such District Engineers promoted as Superintending Enginaers so far ;

(*c*) the number of Assistant Engineers of District Local Board promoted as Engineers so far ;

(*d*) the number of such assistant Engineers not promoted as Executive Engineers as yet ;

(*e*) whether the Government is aware that the High Court of Mysore has held that the full length of sevice of all the local Board Engineers be recognised and counted for all purposes by the Government of Mysore ;

(*f*) if so, the reasons for promoting about 30 Assistant Engineers appointed in P W.D. in 1961 as Executive Engineers setting aside the claims and services of Assistant Engineers of District Local Boards abolished in the year 1959 ;

(*g*) whether the Governmet has any proposal to consider the claims of Assistant Engineers of District Local Boards of former Bombay State and finalise the seniority list of Executive Engineers of the State ?